ಡಿ .ಡಬ್ಲ್ಯು. 1

(ಇಂದು ದಿನಾಂಕ 21-12-2020 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ವಾದಿ ಪರ ಶ್ರೀ ವಿ.ಜಿ.ಎಚ್. ವಕೀಲರಿಂದ-**

**5.** ನಾನು ದಾವೆಯಲ್ಲಿ ಸಲ್ಲಿಸಲಾಗಿರುವ ವಂಶಾವಳಿಯನ್ನು ನೋಡಿದ್ದು, ಅದು ಸರಿ ಇರುವುದಿಲ್ಲ. ನಾಗಪ್ಪ ಸುಬ್ರಾಯ ಕೊಡ್ಲಕೆರೆ ನನಗೆ ಅಜ್ಜನಾಗಬೇಕು. ಅವರಿಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ಪ್ರತಿವಾದಿ ನಂ. 4, 5 ಮತ್ತು 6 ರವರು ನನ್ನ ಸಹೋದರಿಯರು ಎಂದರೆ 6 ನೇ ಪ್ರತಿವಾದಿ ಮಾತ್ರ ನನ್ನ ಚಿಕ್ಕಪ್ಪನ ಪತ್ನಿಯಾಗಿದ್ದು, 4 ಮತ್ತು 5 ನೇ ಪ್ರತಿವಾದಿಗಳು ನನ್ನ ಸಹೋದರಿಯರು ಆಗಿರುವುದಿಲ್ಲ.

**6.** ನನ್ನ ತಂದೆಗೆ ಒಟ್ಟೂ 6 ಜನ ಮಕ್ಕಳು. ಅವರಲ್ಲಿ ಎರಡು ಗಂಡು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ನನ್ನ ಕುಟುಂಬದಲ್ಲಿ ವಾಂಟಣಿ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನವರ ಕವಲಿನ ನಡುವೆ ವ್ಯಾಜ್ಯ ಇತ್ತು ಎಂದರೆ ಸರಿ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಎಲ್ಲವೂ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

**7.** ದಾವಾ 'ಅ' ಅನುಸೂಚಿ ಸ್ವತ್ತುಗಳಲ್ಲಿ ನಮೂದಿಸಿರುವ ಸರ್ವೆ ನಂಬರಗಳಿಗೆ ಸಂಬಂಧಪಟ್ಟಂತೆ ಕಂದಾಯ ದಾಖಲಾತಿಗಳಲ್ಲಿ ನನ್ನ ತಂದೆಯವರ ಹೆಸರು ಅ.ಕು.ಮೆ. ನಾತೆಯಿಂದ ದಾಖಲಾಗಿದೆ ಎಂದರೆ ಸರಿಯಲ್ಲ. ನಿ.ಪಿ. 7 ರ ರೀತ್ಯಾ ನನ್ನ ಅಜ್ಜನ ಕಾಲಾನಂತರದಲ್ಲಿ ನನ್ನ ತಂದೆಯವರ ಹೆಸರು ದಾವಾ 'ಅ' ಅನುಸೂಚಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುತ್ತದೆ ಎಂದರೆ ಸದ್ರಿ ದಾಖಲಾತಿಯ ರೀತ್ಯಾ ದಾಖಲಾಗಿರುತ್ತದೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ